**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್ ಸಿ ನಂ. 107/2016**

ಸಿಡಬ್ಲ್ಯು 11 ಪಿಡಬ್ಲ್ಯು- 8

ದಿನಾಂಕಃ 05.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪೂರ್ಣ ಹೆಸರು : ಸುರೇಶ ಬಾಳಕೃಷ್ಣ ಕೋಷ್ಟಿ

ವಯಸ್ಸು : 51 ವರ್ಷ

ಉದ್ಯೋಗ : ಕಂಡಕ್ಟರ ಕೆ ಎಸ ಆರ್ ಟಿ ಸಿ

ವಾಸ ಸ್ಥಳ : ಪುತ್ತೂರು , ದಕ್ಷಿಣಕನ್ನಡ ಜಿಲ್ಲೆ

**ಮುಖ್ಯ ವಿಚಾರಣೆಃ-** ಮಾನ್ಯ ಸರಕಾರಿ ಅಭಿಯೋಜಕರವರಿಂದಃ-

ನನ್ನ ಖುದ್ದ ಊರು ಕಮೇತೆನಟ್ಟಿ, ಚಾಸಾ 1 ನನ್ನ ಅಳಿಯ. ಚಾಸಾ 7 ರಿಂದ 13 ನನ್ನ ಸಂಬಂಧಿಕರು. ಆರೋಪಿತರು ಗೊತ್ತು. ಮೃತ ಬಾಳಕೃಷ್ಣ ನನ್ನ ತಂದೆ. 30.12.2014 ರಂದು ಸಂಜೆ 06.30 ಗಂಟೆಗೆ ಚಾಸಾ 1 ನಮ್ಮ ಮನೆ ಹಿಂದೆ ಜೇನುಗೂಡು ಬಿಡಿಸಲು ಹೋಗಿದ್ದ. ಅದೇ ಸಮಯದಲ್ಲಿ ಪಕ್ಕದ ಮನೆಯ ಚಾಸಾ 2 ರವರು ಮೂತ್ರ ವಿಸರ್ಜನೆಗೆ ಕುಳಿತಾಗ ಚಾಸಾ 1 ನೋಡಿರುತ್ತಾನೆಂದು ತಿಳಿದು 2 ಮತ್ತು 5 ನೇ ಆರೋಪಿತರು ನಮ್ಮ ಮನೆಗೆ ಬಂದು ಆತನಿಗೆ ಹೊಡೆದು ಹೋಗಿರುತ್ತಾರೆ. ಮರುದಿನ ಬೆಳಗ್ಗೆ 10.30 ಗಂಟೆಗೆ 2 ಮತ್ತು 5 ನೇ ಆರೋಪಿತರು ನಮ್ಮ ಮನೆ ಹಿಂದೆ ಹಾಯ್ದು ಹೋಗುತ್ತಿದ್ದಾಗ ಮೃತ ಬಾಲಕೃಷ್ಣ ಅವರಿಗೆ ನಿನ್ನೆ ಯಾಕೆ ಮಂಜುನಾಥಗೆ ಹೊಡೆದಿರಿ ಎಂದು ಕೇಳಿದಾಗ ನಾವು ಮನೆ

ಒಳಗೆ ಇದ್ದು ಚಾಸಾ 7 ಮನೆ ಮುಂದೆ ಪಾತ್ರೆ ತೊಳೆಯುತ್ತಿದ್ದರು. ಗಲಾಟೆ ಶಬ್ದ ಕೇಳಿ ನಾವು ಹೊರಗೆ ಹೋದಾಗ ಅಷ್ಟು ಜನ ಮನೆಯ ಹಿಂದೆ ಇದ್ದು ತಂದೆ ಜೊತೆ ವಾಗ್ವಾದ ಕೇಳಿದೆವು. ನಿನ್ನೆ ನಮ್ಮ ಕೈಯಲ್ಲಿ ಉಳದಿದ್ದಿರಿ ಬೋಸಡಿ ಮಕ್ಕಳಿರಾ ಅಂತಾ ಬೈದು 3 ಮತ್ತು 6 ನೇ ಆರೋಪಿತರು ನನ್ನ ತಂದೆಯ ಭುಜಕ್ಕೆ ಮತ್ತು ತಲೆಗೆ ಬಡಿಗೆಯಿಂದ ಹೊಡೆದರು. ಅದರಿಂದ ರಕ್ತಗಾಯವಾಯಿತು. ಬಾಯಿ ಮತ್ತು ಮೂಗಿನಿಂದ ರಕ್ತ ಬಂತು. ನನಗೆ 2 ಮತ್ತು 5 ನೇ ಆರೋಪಿತರು ಬಡಿಗೆಯಿಂದ ಎಡಗೈ ಮುಂಗೈ, ಬೆನ್ನಿಗೆ , ತಲೆಗೆ ಹೊಡೆದರು. ಚಾಸಾ 10 ರಿಗೆ 1 ನೇ ಅರೋಪಿ ಬಡಿಗೆಯಿಂದ ತಲೆಗೆ ಹೊಡೆದು ರಕ್ತಗಾಯಪಡಿಸಿದ. ತದನಂತರ ಆತನು ಚಾಸಾ 13 ರ ಮನೆಯಲ್ಲಿ ಹೋಗಿ ಅಡಗಿಕೊಂಡ. ಚಾಸಾ 12 ರಿಗೆ 6, 7 ಮತ್ತು 8 ನೇ ಆರೋಪಿತರು ಬಡಿಗೆಯಿಂದ ಎಡಗೈ ಕೈಬೆರಳುಗಳಿಗೆ, ಬಲಗೈಗೆ, ಬೆನ್ನಿಗೆ ಹೊಡೆದರು. ಚಾಸಾ 1, 7 ಮತ್ತು 8 ರಿಗೆ 6, 7, 8 ಮತ್ತು 10 ನೇ ಆರೋಪಿತರು ಬಡಿಗೆಯಿಂದ ಬೆನ್ನಿಗೆ, ಸೊಂಟಕ್ಕೆ, ಕೈಗೆ ಹೊಡೆದರು. 6 ನೇ ಆರೋಪಿ ನನಗೆ ಹೆದರಿಸಿ ಓಡಿಸಿದ್ದಾನೆ. ನನ್ನ ತಂದೆ ರಕ್ತಸ್ರಾವವಾಗಿ ಬಿದ್ದ ವೇಲೆ ನಮ್ಮ ಮನೆಯಿಂದ 50-60 ಅಡಿ ಅಂತರದಲ್ಲಿ ಹೇದರಿ ಹೋದೆವು. ಆಗ ಚಾಸಾ 8 ನನ್ನ ತಂದೆಗೆ ನೀರು ಹಾಕಲು ತಂದಾಗ 2 ನೇ ಆರೋಪಿ ಕಾಲಿನಿಂದ ಅವಳಿಗೆ ಒದ್ದು ಕೈಯಲ್ಲಿದ್ದ ನೀರಿನ ತಂಬಿಗೆಗೆ ಕಾಲಿನಿಂದ ಒದ್ದು ನಾವು ಸಾಯಿಸಿಲಿಕ್ಕೆ ಬಂದಿದ್ದೇವೆ

ಎಂದು ಹೇಳಿದರು. ಆಗ 1 ನೇ ಆರೋಪಿ ನಾನು ಎಲ್ಲರನ್ನು ಕೊಲೆ ಮಾಡಬೇಕೆಂದು ನಿಮಗೆ ಹೇಳಿದ್ದೆ ಒಬ್ಬನಿಗೆ ಯಾಕೆ ಕೊಲೆ ಮಾಡಿದ್ದೀರಿ ಎಂದು ಉಳಿದ ಆರೋಪಿತರಿಗೆ ಹೇಳಿದ. ಚಾಸಾ 7, 8, 10 ರವರು ಚಾಸಾ 13 ರವರ ಮನೆಗೆ ಜೀವ ರಕ್ಷಣೆಗೊಸ್ಕರ ಹೋದರು.ಆಗ ಎಲ್ಲ ಆರೋಪಿತರು ಚಾಸಾ 13 ರ ಮನೆಯ ಬಾಗಿಲನ್ನು ಮುರಿದರು. 2 ನೇ ಡೋರ ಬಾಗಿಲನ್ನು ಮುರಿಯಲು ಹೋದಾಗ ಅದು ಗಟ್ಟಿ ಇದ್ದರಿಂದ ಮುರಿಯಲಿಲ್ಲ. ಆ ಮನೆಯಿಂದ ಚಾಸಾ 7 ಇವರು ಅವರ ಮೊಬೈಲ ಪೋನನಿಂದ ಅಂಬ್ಯುಲೆನ್ಸಗೆ ಕಾಲ್ ಮಾಡಿದಾಗ ಆ ಕಾಲ್ ಬೆಳಗಾವಿಗೆ ಹೋಗಿದ್ದು ನಂತರ ಚಿಕ್ಕೋಡಿ ಪೋಲಿಸ ಠಾಣೆಯ ಪೋನ ನಂಬರು ಕೊಟ್ಟಿದ್ದರಿಂದ ಅವರಿಗೆ ಪೋನ ಮಾಡಿ ಅರ್ಧ ಗಂಟೆಯಲ್ಲಿ ಪೋಲಿಸರು ಬಂದರು. ಆಗ ಆರೋಪಿತರು ಗೊತ್ತಾಗಿ ಓಡಿ ಹೋದರು. ಅಲ್ಲಿಯವರಿಗೆ 1 ನೇ ಆರೋಪಿ ಚಾಸಾ 13 ರ ಮನೆಯ 2 ನೇಬಾಗಿಲನ್ನು ತೆರೆಯಲು ಪ್ರಯತ್ನ ಮಾಡುತ್ತಿದ್ದ. ಆಗ ಪೋಲಿಸರು ಆತನಿಗೆ ಅಲ್ಲೇ ಹಿಡಿದು ಜೀಪನಲ್ಲಿ ಹಾಕಿಕೂಂಡು 2 ನೇ ಬಾಗಿಲನ್ನು ಪೋಲಿಸರು ತೆಗೆದು ಚಾಸಾ 1, 7 ಮತ್ತು 10 ರವರನ್ನು ಹೊರಗೆ ತಂದರು. ನಂತರ ನನ್ನ ತಂದೆಗೆ ನಾನು ಮತ್ತು ಚಾಸಾ 12 ಚಿಕ್ಕೋಡಿ ಸರ್ಕಾರಿ ಆಸ್ಪತ್ರೆಗೆ ಅಂಬ್ಯುಲೆನ್ಸನಲ್ಲಿ ತಂದೆವು. ಅಲ್ಲಿ ಚಿಕಿತ್ಸೆ ನೀಡಿ ಬೆಳಗಾವಿ ಲೆಕ ವಿವ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಿದೇವು. ಅಲ್ಲಿ ನನ್ನ ತಂದೆ 10 ದಿನ ಇದ್ದು 11 ನೇ

ದಿನಕ್ಕೆ ತೀರಿಕೊಂಡರು. ಅವರಿಗೆ ಆರೋಪಿತರು ಹೊಡೆದ ಏಟಿನಿಂದ ಗಾಯಗೊಂಡು ಸತ್ತರು. ಚಾಸಾ 12 ರವರು ಅದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಡಿಸ್ಚಾರ್ಜ ಆದರು. ನಾನು ಸಹ ಅಲ್ಲಿ ಚಿಕಿತ್ಸೆ ಪಡೆದು ಡಿಸ್ಚಾರ್ಜ್ ಆದೆ. ನಮ್ಮ ಮತ್ತು ಆರೋಪಿತರ ನಡುವೆ ಸುಮರು 30 ವರ್ಷಗಳಿಂದ ಜಮೀನ ಬಗ್ಗೆ ತಂಟೆ ಇದೆ. ಆರೋಪಿತರು ನಾಲ್ಕು ವರ್ಷಕ್ಕೊಮ್ಮೆ ಭೂಮಿ ಬದಲಾವಣೆ ಮಾಡುತ್ತಿದ್ದರು. ಈಗ ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 14 ಸಾಕ್ಷಿ ನೋಡಿ ಗುರುತಿಸುತ್ತಾರೆ. ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೇನೆ.

**ಪಾಟೀ ಸವಾಲುಃ-** ಆರೋಪಿ ಪರ ಶ್ರೀ ಎಸ ಎನ್ ಪಿ ವಕೀಲರಿಂದಃ

ಪೋಲಿಸರು ಎರಡು ಬಾರಿ ನನ್ನ ಹೇಳಿಕೆ ಪಡೆದಿದ್ದಾರೆ. ತಾರಿಖು ಗೊತ್ತಿಲ್ಲ. ಆದರೆ ಒಂದು ನಮ್ಮ ಮನೆ ಹತ್ತಿರ ಇನ್ನೊಂದು ಠಾಣೆಯಲ್ಲಿ ಪಡೆದಿದ್ದಾರೆ. 30.12.2014 ರಂದು ಚಾಸಾ 2 ಮೂತ್ರ ವಿಸರ್ಜನೆ ಮಾಡುತ್ತಿರುವಾಗ ಚಾಸಾ 1 ಸಾಯಂಕಾಲ 06 ರಿಂದ 06.30 ಗಂಟೆಯ ಅವಧಿಯಲ್ಲಿ ನೋಡಿದ್ದಾನೆ. ನಾನು ಈಗ ನನಗೆ ಓದಿ ಹೇಳಿದ 11.01.2015 ರ ನನ್ನ ಪುನಃ ಹೇಳಿಕೆಯನ್ನು ಪೋಲಿಸರಿಗೆ ಕೊಟ್ಟಿದ್ದು ನಿಜ ಇರುತತದೆ. ಇದನ್ನು ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ **ನಿಡಿ 2** ಎಂದು ಗುರುತಿಸಲಾಯಿತು. ನಾನು 30.12.2014 ರಂದು ಮದ್ಯಾಹ್ನ 03 ರಿಂದ 04 ಗಂಟೆಗೆ ನನ್ನ ಕರ್ತವ್ಯಕ್ಕೆ ರಜೆ ಹಾಕಿ ಊರಿಗೆ

ಬಂದಿದ್ದೆ. ಚಾಸಾ 12 ಕೂಡ ರಜೆ ಹಾಕಿ ಆ ದಿನ ಊರಿಗೆ ಬಂದಿದ್ದರು. ನಾನು ರಜೆ ಮೇಲೆ ಆ ದಿನ ಬಂದಿರುವ ಬಗ್ಗೆ ದಾಖಲೆ ಹಾಜರು ಪಡಿಸುತ್ತೇನೆ. 30.12.2014 ರಂದು ಆಗಿದೆ ಎಂದು ಹೇಳಲಾದ ಘಟನೆ ಬಗ್ಗೆ ಚಾಸಾ 1 ನನಗೆ ಅದೇ ದಿನ ರಾತ್ರಿ 09.00 ಗಂಟೆಗೆ ಹೇಳಿದ್ದರು. ಆಗ ಆತನ ಎರಡೂ ಕೈಗಳ ಮುಂಗೈಗೆ ಗಾಯ ಆಗಿತ್ತು. ಅದಕ್ಕೆ ಆತನು ಚಿಕಿತ್ಸೆ ಪಡೆದಿರಲಿಲ್ಲ. ನಾವೇ ಅರಶಿಣ ಪುಡಿ ಹಚ್ಚಿ ಬ್ಯಾಂಡೇಜ್ ಮಾಡಿದೇವು.

2) ಆರೋಪಿತರು ತಮ್ಮ ಮನೆಗೆ ನಮ್ಮ ಮನೆ ಹಿಂದೆ ಇರುವ ರಸ್ತೆ ಮೂಲಕ ಹೋಗಬೇಕಾಗುತ್ತದೆ ಅನ್ನುವದು ನಿಜ. ಆ ರಸ್ತ ಬಿಟ್ಟು ಅವರಿಗೆ ಬೇರೆ ರಸ್ತೆ ಇಲ್ಲ ಅನ್ನುವದು ನಿಜ. ಆ ರಸ್ತೆ ನಮ್ಮ ಮನೆ ಹಿತ್ತಲು ಅನ್ನುವುದು ಸರಿಯಲ್ಲ. ನಮ್ಮ ಮನೆ ಹಿತ್ತಿಲು ಆ ರಸ್ತೆಯ ಪೂರ್ವ ದಿಕ್ಕಿಗೆ ಇದೆ ಅನ್ನುವದು ನಿಜ. ಆರೋಪಿತರು ನಮ್ಮ ಮನೆ ಹಿಂದೆ ಹಾಯ್ದು ಹೋಗುತ್ತಿರುವಾಗ ನಾನು, ಚಾಸಾ 10, 12, ಚಾಸಾ 7 ಮತ್ತು 8 ಇದ್ದೇವು. ಆರೋಪಿತರು ಬರುವದನ್ನು ನಾವು ಕಾಯುತ್ತಿರಲಿಲ್ಲ. 2 ಮತ್ತು 5 ನೇ ಆರೋಪಿತರು ಬೈಕ ಮೇಲೆ ಬಂದರು. ಅವರು ಎಲ್ಲಿ ಹೋಗುತ್ತಿದ್ದರು ಅನ್ನುವದು ಗೊತ್ತಿಲ್ಲ. ಅವರನ್ನು ನನ್ನ ತಂದೆ ನಿಲ್ಲಿಸಿ ಹಿಂದಿನ ದಿನ ಆದ ಜಗಳದ ಬಗ್ಗೆ ಕೇಳಿದರು. ಆಗ ಬೆಳಗ್ಗೆ 10 ರಿಂದ 10.30 ಗಂಟೆ ಆಗಿತ್ತು. ಆಗ ನಾವು ಅಲ್ಲಿಂದ 25-30 ಅಡಿ ಅಂತರದಲ್ಲಿದ್ದೇವು. ಆಗ ನಾವು ನಮ್ಮ ಮನೆ ಒಳಗೆ ತಿಂಡಿ

ಸೇವಿಸುತ್ತಿದ್ದೇವು. ಆವಾಗ ಹೊರಗೆ ಬಾಯಿ ಸಪ್ಪಳ ಕೇಳಿ ನಾವು ಹೊರಗೆ ಬಂದೆವು ಅನ್ನುವದು ನಿಜ. ಆ ಮೊಟಾರಬೈಕ ಅಲ್ಲಿಯೇ ನಿಂತಿತ್ತು. 2 ಮತ್ತು 5 ನೇ ಆರೋಪಿತರು ಆ ಬೈಕನ ಮೇಲೆ ಬಡಿಗೆಗಳನ್ನು ಕಟ್ಟಿದ್ದರು. ಆದರೆ ಕಲ್ಲುಗಳಿರಲಿಲ್ಲ. ನಾವು 5 ಫೂಟ ಅಂತರದಲ್ಲಿ ಅಲ್ಲಿಗೆ ಹೋಗುವಷ್ಟರಲ್ಲಿ ನನ್ನ ತಂದೆಗೆ ಹೊಡೆದರು. ನಮ್ಮ ಜೊತೆ ಚಾಸಾ 1 ಇದ್ದ. ಆ ಘಟನೆಯಲ್ಲಿ ಚಾಸಾ 1 ರ ಕೈಗೆ, ಬೆರಳಿಗೆ ಗಾಯ ಆಯಿತು. ಚಾಸಾ 1, 7 ಚಿಕ್ಕೋಡಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಬಂದರು. ಅಲ್ಲಿ ಅವರು ಚಿಕಿತ್ಸೆ ಪಡೆದಿಲ್ಲ. ಚಾಸಾ 8 ಬೆಳಗಾವಿ ಸರ್ಕಾರಿ ಆಸ್ಪತ್ರೆಗೆ ಹೋದರು. ಘಟನೆ ಅರ್ಧ ತಾಸಿನವರೆಗೆ ನಡೆಯಿತು. ಆ ದಿನ ಪೋಲಿಸರು ಬೆಳಗ್ಗೆ 10.30 ರಿಂದ 11.30 ರ ಒಳಗಡೆ ಅವಧಿಯಲ್ಲಿ ಬಂದಿದ್ದರು. ಅವರಿಗೆ ಚಾಸಾ 7 ಪೋನ ಮಾಡಿದ್ದರು. ಪೋಲಿಸರು ಬಂದಾಗ 1 ನೇಆರೋಪಿ ಮಾತ್ರ ಇದ್ದ ಉಳಿದ ಆರೋಪಿತರು ಓಡಿ ಹೋಗಿದ್ದರು. ಆಗ 1 ನೇ ಆರೋಪಿಯನ್ನು ಪೋಲಿಸರು ತಮ್ಮ ಜೀಪನಲ್ಲಿ ಕರೆದುಕೊಂಡು ಹೋದರು. ಚಾಸಾ 7 ಅಂಬ್ಯುಲೆನ್ಸಗೆ ಪೋನ ಮಾಡಿದ್ದರು. ಚಿಕ್ಕೋಡಿ ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸೆ ಪಡೆದು ಬೆಳಗಾವಿ ಲೆಕ ವಿವ್ ಆಸ್ಪತ್ರೆಗೆ ಹೋದರು.

3) ನಾನು ಮತುತ ಚಾಸಾ 12 ಆ ಆಸ್ಪತ್ರೆಯಲ್ಲಿ 11 ದಿನ ಇದ್ದೆವು. ನನ್ನಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯವನ್ನು ನಾನ ಪೋಲಿಸರ ಮುಂದೆ ಹೇಳಿಲ್ಲ

ಅನ್ನುವುದು ಸರಿಯಲ್ಲ. ಆರೋಪಿತರು ನಮ್ಮ ಮನೆ ಹಿಂದೆ ಇರುವ ರಸ್ತೆ ಮೇಲೆ ನನ್ನ ತಂದೆಗೆ ಬಡಿಗೆ ಮತ್ತು ಕಲ್ಲುಗಳಿಂದ ಹೊಡೆದು ರಕ್ತಗಾಯಪಡಿಸಿ ನಮಗೂ ಕೂಡ ಬಿಡಿಸಲು ಹೋದವರಿಗೆ ಕಲ್ಲು ಮತ್ತು ಬಡಿಗೆಗಳಿಂದ ಹೊಡೆದು ರಕ್ತಗಾಯಪಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ. ನಮ್ಮ ತಂದೆ ಆರೋಪಿತರು ಹೊಡೆದಿದ್ದರಿಂದ ಆಸ್ಪತ್ರೆಯಲ್ಲಿ ತೀರಿಕೊಂಡರು ಎಂದು ಮತ್ತು ನಾವು ಅಲ್ಲಿಲ್ಲಿ ಕಿತ್ತಿಸಡೆದಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ. ಆರೋಪಿತರು ಚಾಸಾ 13 ರ ಮನೆಯ ಮುಂಭಾಗಿಲನ್ನು ಒಡೆದರು ಮತ್ತು ಅವರ ಮನೆಯಲ್ಲಿದ್ದ ಚಾಸಾ 1, 7 ಮತ್ತು 8 ಇವರನ್ನು ಹೊರಗೆ ತರಲು 2 ನೇ ಬಾಗಿಲು ಮುರಿಯಲು ಪ್ರಯತ್ನ ಮಾಡುತ್ತಿದ್ದರು ಮತ್ತು ಪೋಲಿಸರು ಬಂದಾಗ ಎಲ್ಲ ಆರೋಪಿತರು ಓಡಿ ಹೋದರು ಆಗ 1 ನೇ ಆರೋಪಿ 2 ನೇ ಬಾಗಿಲು ಮುರಿಯುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ. ಆಗ 1 ನೇ ಆರೋಪಿಗೆ ಪೋಲಿಸರು ಜೀಪನಲ್ಲಿ ಕೂಡ್ರಿಸಿಕೊಂಡು ಚಾಸಾ 1, 7 ಮತ್ತು 8 ರನ್ನು ಆ ಮನೆಯಿಂದ ಹೊರಗೆ ತೆಗೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವದು ಸರಿಯಲ್ಲ. 2 ಮತ್ತು5 ನೇ ಆರೋಪಿತರು ನಮ್ಮ ಮನೆ ಹತ್ತಿರದಿಂದ ತಮ್ಮ ಮನೆಗೆ ಹೋಗುತ್ತಿರುವಾಗ ನಾವೇ ಅವರನ್ನು ತಡೆದು ಹೊಡೆಬಡೆ ಮಾಡಿದ್ದೇವೆ ಅನ್ನುವುದು ಸರಿಯಲ್ಲ. ನನ್ನ ತಂದೆಗೆ ಆ ದಿನದಂದು 71 ವರ್ಷ

ವಯಸ್ಸಾಗಿತ್ತು. ಈ ಘಟನಗೂ ಮತ್ತು ನನ್ನ ತಂದೆ ಸಾವಿಗೂ ಯಾವದೇ ಸಂಂಧ ಇಲ್ಲ ಅನ್ನುವುದು ಸರಿಯಲ್ಲ. ನಾವು ಆರೋಪಿತರನ್ನು ಆ ದಿನ ಹೊಡೆದಿದ್ದು ಅವರು ಮಾಡಿದ ಕೇಸನಿಂದ ಬಚಾವ ಆಗಲು ನನ್ನ ತಂದೆ ತೀರಿಕೊಂಡಿದ್ದರಿಂದ ಲಾಭ ಪಡೆದು ಅವರ ಮೇಲೆ ಸುಳ್ಳು ಕೇಸು ಮಾಡಿ ಸುಳ್ಳು ಸಾಕ್ಷ್ಯ ಕೊಡುತ್ತಿದ್ದೇನೆ ಅನ್ನುವುದು ಸರಿಯಲ್ಲ. ಆ ದಿ ಚಾಸಾ1, 7 ಮತ್ತು 8 ರಿಗೆ ಯಾವದೇ ಗಾಯ ಆಗಿಲ್ಲ, ಅವರು ಚಿಕಿತ್ಸೆಪಡೆದಿಲ್ಲ ಮತ್ತು ಅವರು ಅಲ್ಲಿರಲಿಲ್ಲ ಅನ್ನುವುದು ಸರಿಯಲ್ಲ.

**<u>ಮರು ಮುಖ್ಯ ವಿಚಾರಣೆ</u>** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾಕ್ಷಿಗೆ ಓ ಹೆ ಕೆ ಸರಿ ಅದೆ ಅಂತಾ ಹೇಳುತ್ತಾರೆ)

ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಚಿಕ್ಕೋಡಿ.